

# ಬಟ್ಟೆಯನ್ನು ಕತ್ತರಿಸಿ ಜೋಡಿಸಿ ಹೊಲಿಯುವುದು ಹೇಗೆ

**ಈ ವಿಡಿಯೋದಲ್ಲಿ ನಾವು ಎರಡು ಬಟ್ಟೆಗಳನ್ನು ಕತ್ತರಿಸಿ ಒಟ್ಟಿಗೇ ಹೊಲಿಯುವುದು ಮತ್ತು ಅದಕ್ಕೆ ಅಂತಿಮರೂಪ ಹೇಗೆ ಕೊಡುವುದು ಎಂಬುದನ್ನು ಕಲಿತುಕೊಳ್ಳುತ್ತೇವೆ.**



ಇದಕ್ಕಾಗಿ ಸುಮಾರು ಇಪ್ಪತ್ತು ಇಂಚು ಉದ್ದ ಮತ್ತು 8 ಇಂಚು ಅಗಲದ ಒಂದು ಬಟ್ಟೆ, ಅಳತೆ ಟೇಪು, ಸ್ಕೇಲು, ವಾಟರ್ ಸಾಲ್ಯುಬಲ್ ಮಾರ್ಕರ್, ಮಣಿಪಿನ್ನುಗಳು ಮತ್ತು ಒಂದು ಜೊತೆ ಕತ್ತರಿಗಳು ಬೇಕು.

ಇದನ್ನು ಶುರು ಮಾಡುವುದಕ್ಕೂ ಮುಂಚೆ ಬಟ್ಟೆಯ ಉದ್ದ-ಅಗಲ ನಿರ್ಧರಿಸಲು ಬಟ್ಟೆಯ ವಿನ್ಯಾಸಗಳನ್ನು ತಿಳಿದುಕೊಳ್ಳುವುದು ಬಹಳ ಮುಖ್ಯ. ಇದಕ್ಕಿಲ್ಲಿ ಸುಲಭ ಮಾರ್ಗವಿದೆ.







ಒಂದು ಮಡಚಿದ ಬಟ್ಟೆಯ ತುಂಡನ್ನು ತೆಗೆದುಕೊಂಡು ಸಮತಟ್ಟಾಗಿ ಇಡಿ. ಅದನ್ನು ನಿಧಾನವಾಗಿ ಎಳೆದು ಹಿಗ್ಗಿಸಲು ಪ್ರಯತ್ನಿಸಿ. ಉದ್ದದ ಭಾಗ ಹಿಗ್ಗುವುದಿಲ್ಲ. ಅಗಲದ ಭಾಗ ಸ್ವಲ್ಪಮಟ್ಟಿಗೆ ಹಿಗ್ಗುತ್ತದೆ.

ಈಗ ನೀವು ಬಟ್ಟೆಯನ್ನು ಬ್ಲಾಕ್ ಮಾಡಲು ಸಿದ್ಧರಾಗಿದ್ದೀರಿ.

ಬಟ್ಟೆಯ ಒಳ ಭಾಗ ಮೇಲಕ್ಕೆ ಇರುವಂತೆ ಬಟ್ಟೆಯನ್ನು ಎರಡು ಎಳೆ ಮಡಚಿ ಇಟ್ಟುಕೊಳ್ಳಿ. ಉದ್ದದ ಕಡೆ 10 ಇಂಚು ಅಳೆದು 'ಎ' ಎಂದು ಗುರುತು ಮಾಡಿ. ಅಗಲದ ಕಡೆಗೆ 8 ಇಂಚು ಅಳೆದು ಅದಕ್ಕೆ 'ಬಿ' ಎಂದು ಗುರುತು ಮಾಡಿ. 'ಬಿ' ಗುರುತಿನಿಂದ 10 ಇಂಚು ಲಂಬ ಗೆರೆ ಎಳೆದು 'ಸಿ' ಗುರುತು ಹಾಕಿ. 'ಎ' ಗುರುತಿನಿಂದ ಅಗಲದ ಕಡೆಗೆ 8 ಇಂಚು ಅಳತೆ ಮಾಡಿ 'ಸಿ' ಕಡೆಗೆ ಸರಿಹೊಂದಿಸಿ.












ಈಗ ವಾಟರ್ ಸಾಲ್ಯುಬಲ್ ಮಾರ್ಕರ್ ಮತ್ತು ಸ್ಕೇಲ್‌ನಿಂದ ಗುರುತುಗಳನ್ನು ಸೇರುವಂತೆ ಗೆರೆ ಹಾಕಿ, 8/10 ಇಂಚಿನ ಆಯತಾಕಾರವನ್ನು ರಚಿಸಿ.

ಈಗಷ್ಟೇ ಗುರುತುಮಾಡಿದ ಗೆರೆಯಿಂದ ಒಳಕ್ಕೆ ಬಟ್ಟೆಯನ್ನು ಹಿಡಿದಿಟ್ಟುಕೊಳ್ಳುವಂತೆ ಪಿನ್ನುಗಳನ್ನು ಚುಚ್ಚಿ. ಇದು ಬಟ್ಟೆಯ ಅಂಚುಗಳು ಒಟ್ಟಿಗೇ ಭದ್ರವಾಗಿರುವಂತೆ ಇಡುತ್ತದೆ. ನೀವು ಇದನ್ನು ಬಟ್ಟೆ ಕತ್ತರಿಸುವುದಕ್ಕೂ ಮೊದಲು ಮಾಡಬೇಕು.

ಈಗ ಗುರುತು ಹಾಕಿರುವ ಗೆರೆಗಳನ್ನು ಅನುಸರಿಸಿ ಬಹಳ ಜಾಗರೂಕತೆಯಿಂದ ಹೆಚ್ಚುವರಿ ಬಟ್ಟೆಯನ್ನು ಕತ್ತರಿಸಿ. ಪೂರ್ತಿ ಕತ್ತರಿಸಿದ ನಂತರ ಎಲ್ಲಾ ಪಿನ್ನುಗಳನ್ನು ತೆಗೆಯಿರಿ. ಈಗ ಒಂದೇ ಸೈಜಿನ ಎರಡು ಬಟ್ಟೆಗಳು ನಿಮ್ಮಲ್ಲಿರುತ್ತವೆ.

ಬಟ್ಟೆಯನ್ನು ತಿರುವಿ, ಸರಿಯಾದ ಭಾಗಗಳನ್ನು ಒಟ್ಟಿಗೇ ಜೋಡಿಸಿ. ಅದರ ಅಂಚುಗಳನ್ನು ಪಿನ್ನಿನಿಂದ ಚುಚ್ಚಿ. ಈಗ ನೀವು ಬಟ್ಟೆಯ ಎರಡೂ ತುಂಡುಗಳನ್ನು ಒಟ್ಟಿಗೇ ಹೊಲಿಯಲು ಸಿದ್ಧರಾಗಿದ್ದೀರಿ.

ಬಟ್ಟೆಯ ತುಂಡುಗಳನ್ನು ಪ್ರೆಷರ್ ಫುಟ್ ತಳದಲ್ಲಿ ಇಟ್ಟು, ನೀಡಲ್ ಪ್ಲೇಟ್‌ನಿಂದ ಅರ್ಧ ಇಂಚು ಗುರುತುಮಾಡಿ, ಬಟ್ಟೆಯ ಅಂಚುಗಳನ್ನು ಸರಿಹೊಂದಿಸಿ, ಪ್ರೆಷರ್ ಫುಟ್‌ನ್ನು ಕೆಳಕ್ಕಿಳಿಸಿ.

ಸ್ವಿಚ್ ಪ್ಯಾಟರ್ನ್ ನಾಬ್‌ನ್ನು ‘ಎ’ಗೆ ಇಟ್ಟು, ಸ್ಟಿಚ್ ಲೆಂಗ್ತ್‌ನ್ನು 2 ಮತ್ತು 3ರ ಮಧ್ಯೆ ಇಡಿ. ಮೊದಲಿಗೆ ಮುಂದಕ್ಕೆ ಹೊಲಿಗೆ ಹಾಕಲು ಪ್ರಾರಂಭಿಸಿ. ನಂತರ ರಿವರ್ಸ್ ಸ್ವಿಚ್ ಸೆಲೆಕ್ಟರ್‌ನ್ನು ಆಯ್ಕೆ ಮಾಡಿಕೊಂಡು, ಹೊಲಿಗೆಯನ್ನು ಲಾಕ್ ಮಾಡಲು ಮೇಲುತುದಿಯವರೆಗೂ ಹಿಂದಕ್ಕೆ ಹೊಲಿಯುತ್ತಾ ಬನ್ನಿ.

ರಿವರ್ಸ್ ಸ್ಟಿಚ್ ಸೆಲೆಕ್ಟರ್‌ನ್ನು ರಿಲೀಸ್ ಮಾಡಿ, ಕೆಳತುದಿಯವರೆಗೆ ಹೊಲಿಯುವುದನ್ನು ಮುಂದುವರಿಸಿ, ಯಂತ್ರವನ್ನು ನಿಲ್ಲಿಸಿ. ಸೂಜಿ ಹಾಕಲು ಬ್ಯಾಲೆನ್ಸ್ ವ್ಹೀಲನ್ನು ನಿಮ್ಮ ಕಡೆಗೆ ತಿರುಗಿಸಿ, ರಿವರ್ಸ್ ಸ್ವಿಚ್ಚ ಬಟನ್‌ನ್ನು ಪ್ರೆಸ್ ಮಾಡಿ. ಹೀಗೆ ಹಿಮ್ಮುಖ ಹೊಲಿಗೆ ಹಾಕಿ ಬಟನ್ ರಿಲೀಸ್ ಮಾಡಿ, ಹೊಲಿಗೆಯನ್ನು ಲಾಕ್ ಮಾಡಲು ಕೊನೆಯವರೆಗೂ ಹೊಲಿಗೆ ಮುಂದುವರಿಸಿ.

ಇವಿಷ್ಟೂ ಆದ ಮೇಲೆ, ಪ್ರೆಷರ್ ಫುಟ್ ಮೇಲಕ್ಕೆತ್ತಿ. ದಾರಗಳನ್ನು ಟ್ರಿಮ್ ಮಾಡಿ.

ಎರಡು ತುಂಡುಳನ್ನೂ ಒಟ್ಟಿಗೇ ಹೊಲಿದ ಮೇಲೆ, ಬಟ್ಟೆಯಲ್ಲಿ ಅಸ್ತವ್ಯಸ್ತವಾಗಿರುವ ಅಂಚುಗಳಿಗೆ ಜಿಗ್‌ಜಾಗ್ ಹೊಲಿಗೆ ಹಾಕಿ ಅಂತಿಮರೂಪ ನೀಡಿ.

ಇದಕ್ಕೆ ಮಾಡಬೇಕಾದರೆ ಸ್ಟಿಚ್ ಪ್ಯಾಟರ್ನ್ ಸೆಲೆಕ್ಟರ್‌ನ್ನು ‘ಸಿ’ಗೆ ಇಡಬೇಕು. ಮತ್ತು ಸ್ಟಿಚ್ ಲೆಂಗ್ತ್ ಸೆಲೆಕ್ಟರನ್ನು 1ಕ್ಕೆ ಜರುಗಿಸಬೇಕು.

ಬಟ್ಟೆಯ ಅಂಚನ್ನು ಫುಟ್‌ಗ್ರೂವ್‌ನ ಬಲಭಾಗಕ್ಕೆ ಸರಿಹೊಂದಿಸಿ ಇಡಿ.



ಬ್ಯಾಲೆನ್ಸ್ ವ್ಹೀಲ್‌ನ್ನು ನಿಮ್ಮ ಕಡೆಗೆ ತಿರುಗಿಸಿ, ಬಟ್ಟೆಯ ಹೊರಭಾಗಕ್ಕೆ ಸೂಜಿ ಹೇಗೆ ಹೋಗುತ್ತದೆ ಎಂದು ನೋಡಿ. ನೀವು ಬಟ್ಟೆಯ ಅಂಚನ್ನು ಸರಿಯಾಗಿ ಹೊಂದಿಸಿಟ್ಟಿದ್ದೇ ಆದರೆ ಹೊಲಿಗೆ ಮುಂದುವರಿಸಿ.

ಹೊಲಿಯುತ್ತಾ ಬಟ್ಟೆಯ ಕೊನೆಗೆ ಬಂದಾಗ, ಪ್ರೆಷರ್ ಫುಟ್ ಎತ್ತಿರಿ, ಬಟ್ಟೆಯನ್ನು ಹೊರಕ್ಕೆ ತೆಗೆದು ಹೆಚ್ಚಿನ ದಾರವನ್ನು ಟ್ರಿಮ್ ಮಾಡಿ.  ನೀವೀಗ ನೀವು ಬಟ್ಟೆಯ ಎರಡು ತುಂಡುಗಳನ್ನು ಕತ್ತರಿಸಿ ಹೊಲಿಯುವುದು ಹೇಗೆ, ಜಿಗ್‌ಜಾಗ್ ಹೊಲಿಗೆ ಹಾಕಿ ಅಂತಿಮ ರೂಪ ಕೊಡುವುದು ಹೇಗೆ ಎಂಬುದನ್ನು ತಿಳಿದಿದ್ದೀರಿ.

ಇದರಲ್ಲಿ ನೀವು ಪರಿಣಿತರಾಗುವವರೆಗೂ ನಿರಂತರ ಅಭ್ಯಾಸ ಮಾಡಿ.  ಇದು ಬಹುಕಾಲ ನಿಮ್ಮ ಸೃಜನಶೀಲತೆಯನ್ನು ಹೆಚ್ಚಿಸುತ್ತದೆ.